ಒ.ಎಸ್.ನಂ:87/2018
ಡಿ.ಡಬ್ಲೂ.1

**ದಿ:10.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲು:-**ವಾದಿ ಪರ ಶ್ರೀ.**B.S.,.,**ವಕೀಲರಿಂದ:-

ನಾನು ಪಿಯುಸಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ದಾವಾ ಆಸ್ತಿಯು ನಮ್ಮ ಅಜ್ಜನಾದ ಹನುಮಂತಪ್ಪರವರಿಗೆ ಹರಾಜಿನಿಂದ ಬಂದಿರುತ್ತದೆ . ನನ್ನ ಖಾಯಂ ವಿಳಾಸ ತೋರಣಗಟ್ಟೆ ಇರುತ್ತದೆ . ವಾದಿ ರಾಮಣ್ಣ ರವರ ಖಾಯಂ ವಿಳಾಸ ಕೂಡ ತೊರಣಗಟ್ಟೆ ಗ್ರಾಮ ಇರುತ್ತದೆ ಎಂದರೆ ಸರಿ. ಸದರಿ ವಾದಿ ರಾಮಣ್ಣರವರು ಅವರ ತಂದೆ ತಿಪ್ಪಯ್ಯರವರು ಕಟ್ಟಿಸಿದ ದಾವಾ ಆಸ್ತಿಯಲ್ಲಿ ವಾಸವಿರುತ್ತಾರೆ ಎಂದರೆ ಸರಿ. ತಿಪ್ಪಯ್ಯರವರು ಮರಣಾ ನಂತರ ವಾದಿ ರಾಮಣ್ಣರವರು ದಾವಾ ಆಸ್ತಿಯಲ್ಲಿ ವಾಸವಿರುತ್ತಾರೆ ಎಂದರೆ ಸರಿ. ವಾದಿ ರಾಮಣ್ಣರವರಿಗೆ ಈಗ 93 ವರ್ಷ ವಯಸ್ಸಾಗಿರುತ್ತದೆ , ಓಡಾಡಲು ಆಗುವುದಿಲ್ಲ ಎಂದರೆ ಸರಿ. ವಾದಿ ರಾಮಣ್ಣರವರಿಗೆ ಕಿವಿ ಕೇಳುವುದಿಲ್ಲ, ಕಣ್ಣು ಕಾಣುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಈಗ ಪ್ರಸ್ತುತ ವಾದಿ ರಾಮಣ್ಣ ಮತ್ತು ಅವರ ಮಗ ಮಂಜುನಾಥ ವಾಸ ಇರುತ್ತಾರೆ ಎಂದರೆ ಸಾಕ್ಷಿ ದಾವಾ ಆಸ್ತಿಯಲ್ಲ್ಲಿ ಮನೆ ಬಿದ್ದು ಹೋಗಿರುತ್ತದೆ , ಹಂಚುಗಳು ಮಾತ್ರ ಇರುತ್ತದೆ ಎಂದು ಹೇಳುತ್ತಾರೆ . ವಾದಿ ರಾಮಣ್ಣ ದಾವಾ ಆಸ್ತಿಯಲ್ಲಿ ವಾಸವಿದ್ದಾಗ ಮನೆಯ ಮುಂದು ದನ ಕರುಗಳನ್ನು ಕಟ್ಟಿಕೊಂಡಿದ್ದರು ಎಂದರೆ ಸಾಕ್ಷಿ ಮನೆ ಮುಂದೆ ಇದ್ದ ದಾರಿಯಲ್ಲಿ ಕಟ್ಟಿಕೊಂಡಿರುತ್ತಾರೆ ಎಂದು ಹೇಳುತ್ತಾರೆ . ವಾದಿ ರಾಮಣ್ಣರವರ ದಾವಾ ಆಸ್ತಿಯ ಖಾತಾ ನಂಬರ್ 54/1 , 54/2 ಇರುತ್ತದೆ ಎಂದರೆ ಸರಿ. ಸದರಿ ಖಾತಾ ನಂಬರ್ ನ ಮನೆಯಲ್ಲೇ ವಾದಿ ರಾಮಣ್ಣ ರವರು ಹುಟ್ಟಿನಿಂದಲೂ ವಾಸವಿರುತ್ತಾರೆ ಎಂದರೆ ಸರಿ. ನನ್ನ ಅಜ್ಜ ಹನುಮಂತಪ್ಪರವರು ಹರಾಜಿನಿಂದ ಪಡೆದುಕೊಂಡಿರುತ್ತಾರೆ ಎಂದು ಹೇಳುವ ಆಸ್ತಿಯ ಖಾತೆ ನಂಬರ್ 18 ಇರುತ್ತದೆ . ಸದರಿ ಆಸ್ತಿಯಲ್ಲಿ ಎರಡು ಸೈಟ್ ಗಳು ಇದ್ದು ಅವುಗಳ ವಿಸ್ತೀರ್ಣ ತಲಾ 8 X 8 ಗಜಾ ಇರುತ್ತದೆ . ನಾನು ಸದರಿ ಹರಾಜಿಗೆ ಸಂಬಂದಿಸಿದ ಹಾಗೆ ದಾಖಲೆಗಳನ್ನು ನ್ಯಾಯಲಯಕ್ಕೆ ಹಾಜರುಪಡಿಸಿರುತ್ತೇನೆ . ಹರಾಜಿನ ದಾಖಲೆಗಳ ಆಧಾರದ ಮೇಲೆ ನಮ್ಮ ಚಿಕ್ಕಪ್ಪರಾದ ಜೆ ಹೆಚ್ ಕೃಷ್ಣ ಮೂರ್ತಿ ರವರ ಹೆಸರಿಗೆ 7 ವರ್ಷದ ಹಿಂದೆ ಖಾತೆ ಅಗಿರುತ್ತದೆ. ನಮ್ಮ

ಚಿಕ್ಕಪ್ಪ ನ ಹೆಸರಿಗೆ ಖಾತೆ ಆಗುವ ಪೂರ್ವದಲ್ಲಿ ನಮ್ಮ ಅಜ್ಜ ಹನುಮಂತಪ್ಪ ರವರ ಹೆಸರಿಗೆ ಸದರಿ ಆಸ್ತಿ ಇತ್ತು . ನಾವು ಕಳೆದ 15 ವರ್ಷದ ಹಿಂದಿನಿಂದಲೂ ಸದರಿ ಆಸ್ತಿ ನಂಬರ್ 18ಕ್ಕೆ ಸಂಬದಿಸಿದ ಹಾಗೆ ಕಂದಾಯ ಕಟ್ಟಿಕೊಂಡು ಬಂದಿರುತ್ತೇವೆ , ಅದರ ಪೂರ್ವದಲ್ಲಿ ಕಂದಾಯ ಕಟ್ಟಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ . ನಾವು 15 ವರ್ಷದ ಹಿಂದಿನ ಕಂದಾಯ ಕಟ್ಟಿರುವ ದಾಖಲೆಗಳನ್ನು ಪಂಚಾಯತಿಯಲ್ಲಿ ಪಡೆದುಕೊಂಡು ಹಾಜರುಪಡಿಸುತ್ತೀರ ಎಂದರೆ ಸಾಕ್ಷಿ ಪಂಚಾಯತಿಯಲ್ಲಿ ಲಭ್ಯವಿರುವುದಿಲ್ಲ ಎಂದು ಹೇಳುತ್ತಾರೆ . ಸದರಿ ದಾಖಲೆಗಳು ಲಭ್ಯವಿರುವುದಿಲ್ಲ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ . ಸನ್ 1962 ರಿಂದ ನನ್ನ ಅಜ್ಜನಿಗೆ ಖಾತೆ ಆಗಿರುವ ಬಗ್ಗೇ ದಾಖಲೆಗಳಾಗಲಿ ಕಂದಾಯ ರಶೀದಿಗಳಾಗಲೀ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಅಜ್ಜ ಹನುಮಂತಪ್ಪರವರಿಗೆ ಒಟ್ಟು 4 ಜನ ಗಂಡು ಮಕ್ಕಳು ಇರುತ್ತಾರೆ . ಅವರುಗಳು ಸಂಜೀವಪ್ಪ , ನಮ್ಮ ತಂದೆ ರಾಮಾಂಜನೇಯ , ಹೊನ್ನೂರಪ್ಪ ಮತ್ತು ಕೃಷ್ಣ ಮೂರ್ತಿ ಗಂಡು ಮಕ್ಕಳು ಇರುತ್ತಾರೆ ಮತ್ತು ಶಾರದಮ್ಮ , ಯಶೋದಮ್ಮ , ವಿಜಿಯಮ್ಮ ಮತ್ತು ಲಲಿತಮ್ಮ ಎಂಬ 4 ಜನ ಹೆಣ್ಣು ಮಕ್ಕಳು ಇರುತ್ತಾರೆ . ನನ್ನ ಅಜ್ಜ ಹನುಮಂತಪ್ಪ ರವರ ಹೆಂಡತಿ ಹೆಸರು ಒಬಳಮ್ಮ ಇರುತ್ತದೆ . ನನ್ನ ಅಜ್ಜ ಹನುಮಂತಪ್ಪ ಮೊದಲಿಗೆ ಮರಣಹೊಂದಿದ್ದು , ನಂತರ ನಮ್ಮ ಅಜ್ಜಿ ಒಬಳಮ್ಮ ಮರಣಹೊಂದಿರುತ್ತಾರೆ . ನನ್ನ ಅಜ್ಜ ಹನುಮಂತಪ್ಪರವರು ಸನ್ 1979 ರಲ್ಲಿ ಮರಣಹೊಂದಿರುತ್ತಾರೆ . ನನ್ನ ಅಜ್ಜನ ಮರಣಾ ನಂತರ ಅವರ ಹೆಸರಿನಲ್ಲಿರುವ ಖಾತೆಗಳು ಅವರ ಹೆಂಡತಿಯಾದ ಒಬಳಮ್ಮ ಅವರ ಹೆಸರಿಗೆ ಮಾಡಿಕೊಂಡಿರುವುದಿಲ್ಲ . ನನ್ನ ಅಜ್ಜಿ ಒಬಳಮ್ಮ ಸನ್ 2001 ರಲ್ಲಿ ಮರಣಹೊಂದಿರುತ್ತಾರೆ . ಸದರಿ ಆಸ್ತಿಯ ಖಾತೆಯು ನೇರವಾಗಿ ನಮ್ಮ ಅಜ್ಜ ಹನುಮಂತಪ್ಪರವರಿಂದ ನನ್ನ ಚಿಕ್ಕಪ್ಪ ಕೃಷ್ಣಮೂರ್ತಿ ಅವರ ಹೆಸರಿಗೆ ಬಂದಿರುತ್ತದೆ . ನನ್ನ ತಂದೆ ಸನ್ 2001 ರಲ್ಲಿ ಮರಣಹೊಂದಿರುತ್ತಾರೆ . ಸನ್ 2008 ರಲ್ಲಿ ನನ್ನ ಚಿಕ್ಕಪ್ಪರಾದ ಹೊನ್ನೂರಪ್ಪ ಮರಣಹೊಂದಿರುತ್ತಾರೆ . ಸನ್ 2012 ರಲ್ಲಿ ನಮ್ಮ ದೊಡಪ್ಪ ಸಂಜೀವಪ್ಪರವರು ಮರಣಹೊಂದಿರುತ್ತಾರೆ . ನನ್ನ ಚಿಕ್ಕಪ್ಪ ಕೃಷ್ಣ ಮೂರ್ತಿ ರವರು ಸನ್ 2020 ರಲ್ಲಿ ಮರಣಹೊಂದಿರುತ್ತಾರೆ . ನನ್ನ ದೊಡ್ಡಪ್ಪ ಮತ್ತು ಚಿಕ್ಕಪ್ಪರವರಿಗೆ ವಾರಸುದಾರರು ಜೀವಂತ ಇರುತ್ತಾರೆ

. ನಾವೇಲ್ಲರೂ ನಮ್ಮ ಚಿಕ್ಕಪ್ಪ ಕೃಷ್ಣ ಮೂರ್ತಿ ರವರ ಹೆಸರಿಗೆ ಖಾತೆ ಆಗಲು ಒಪ್ಪಿಗೆ ನೀಡಿರುತ್ತಾರೆ . ಸದರಿ ಒಪ್ಪಿಗೆ ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ . ಸಾಕ್ಷಿ ಮುಂದುವರೆಸಿ ನಾವು ಎಲ್ಲರೂ ಸೇರಿ ಪಂಚಾಯತಿಯಲ್ಲಿ ಒಪ್ಪಿಗೆ ಕೊಟ್ಟಿರುತ್ತೇವೆ ಎಂದು ಹೇಳುತ್ತಾರೆ . ಅದಕ್ಕೆ ಸಂಬಂದಿಸಿದ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸನ್ 1962 ರಿಂದ ಈಚೆಗೆ ದಾವಾ ಆಸ್ತಿಯ ಬಗ್ಗೆ ಯಾವ ವ್ಯವಹಾರ ಆಗಿರುತ್ತದೆ ಎಂದರೆ ಸಾಕ್ಷಿ ಗುರುಪ್ಪ , ವಾದಿ ರಾಮಪ್ಪ ಮತ್ತು ನಾಗೇಂದ್ರರವರು ಗಲಾಟೆ ಮಾಡಿಕೊಂಡು ಕೊರ್ಟ್ ಗೆ ಪ್ರಕರಣವನ್ನು ದಾಖಲಿಸಿರುತ್ತಾರೆ . ಗುರಪ್ಪ ಎಂಬುವವರು ನನಗೆ ಸಂಬಂದದಲ್ಲಿ ಮಾವ ಆಗಬೇಕು . ದಾವಾ ಆಸ್ತಿಗೆ ಸಂಬಂದಿಸಿದ ಹಾಗೆ ಸದರಿ ಗುರಪ್ಪ ರವರು ಇದೇ ನ್ಯಾಯಾಲಯದಲ್ಲಿ ಸದರಿ ದಾಖಲೆಗೆ ಸಂಬಂದಿಸಿದ ಹಾಗೆ ದಾವೆ ದಾಖಲಿಸಿರುತ್ತಾರೆ ಎಂದಗೆ ನನಗೆ ಗೊತ್ತಿಲ್ಲ. ಗುರಪ್ಪ ರವರು ನಾನು ತಿಳಿಸಿರುವ ಖಾತೆ ನಂಬರ್ 18 ವಿಸ್ತೀರ್ಣ 8 X 8 ಗಜ ಸೈಟ್ ಗಳಿಗೆ ಸಂಬದಿಸಿದ ಹಾಗೆ ಸದರಿ ದಾವೆಯನ್ನು ವಾದಿಯ ವಿರುದ್ದ ಸಲ್ಲಿಸಿರುತ್ತಾರೆ ಎಂದರೆ ಇರಬಹುದು . ಸದರಿ ದಾವೆ ಸಂಖ್ಯೆ 65/2002 ಇರುತ್ತದೆ , ಅದು ವಜಾ ಆಗಿರುತ್ತದೆ ಎಂದರೆ ನನಗೆ ಗೋತ್ತಿರುವುದಿಲ್ಲ . ಸದರಿ ದಾವೆ ವಜಾ ಆದ ನಂತರ ಗುರಪ್ಪ ರವರು ದಾವಣಗೆರೆಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ RA 265/2004 ರಂತೆ ಅಫೀಲು ಸಲ್ಲಿಸಿರುತ್ತಾರೆ , ಅದೂ ಸಹ ವಜಾ ಆಗಿರುತ್ತದೆ ಎಂದರೆ ಸಾಕ್ಷಿ ಆಗಿರಬಹುದು ಎಂದುಹೇಳುತ್ತಾರೆ .

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು , ಆಲಿಸಿ ಸಮಯ ನೀಡಲಾಂಜುತು )

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

ಸಹಿ/-

ಸಿವಿಲ್ ನ್ಯಾಯಾಧೀಶರು, ಜಗಳೂರು